**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 2**
**ಚಾ.ಸಾ.ಸಂಖ್ಯೆಃ 7**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಮಹಾದೇವ ತುಬಾಕಿ |
| ತಂದೆಯ ಹೆಸರುಃ | ಸುಭಾಸ |
| ವಯಸ್ಸುಃ | **32** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ನನಗೆ ಚಾಸಾ-**11** ಇವರ ಪರಿಚಯವಿದೆ. ಈಗ ನಾನು ನೋಡುತ್ತಿರುವ ಪಂಚನಾಮೆಯ ಮೇಲೆ ನನ್ನ ಸಹಿ ಇದೆ. (ಸದರಿ ಪಂಚನಾಮೆ ಬ್ಯಾನರ ಹರಿದು ಒಗೆದ ಜಾಗೆಯ ಪಂಚನಾಮೆ ಇದ್ದು, ಸದರಿ ಪಂಚನಾಮೆಯನ್ನು ನಿಪಿ-**8** ಅಂತ, ಸಾಕ್ಷಿದಾರರ ಸಹಿಯನ್ನು ನಿಪಿ-**8**(ಎ) ಅಂತ ಗುರುತಿಸಲಾಯಿತು). ಆಗ ಈಗ ನೋಡುತ್ತಿರುವ ಫೋಟೊ ತೆಗೆಸಿರುತ್ತಾರೆ. (ಸದರಿ ಫೋಟೊದ ಬಗ್ಗೆ ಭಾರತಿ ಸಾಕ್ಷ್ಯ ಅಧಿನಿಯಮ **65**(ಬಿ) ಪ್ರಮಾಣ ಪತ್ರ ಇರುವ ಬಗ್ಗೆ ಖಚಿತಪಡಿಸಿಕೊಂಡು ನಿಪಿ-**9** ಅಂತ ಗುರುತಿಸಲಾಯಿತು). ನನಗೆ ಅಲ್ಲಿ ಏನು ವಿಷಯ ಬರೆದುಕೊಂಡಿದ್ದಾರೆ ಅಂತ ಗೊತ್ತಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು. )

**ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-**

**1.** ದಿ: **15.02.2023** ರಂದು ಮಧ್ಯಾಹ್ನ **12** ರಿಂದ **1-00** ಗಂಟೆಗೆಯವರೆಗೆ ಚಾಸಾ-**11** ಇವರು ತೋರಿಸಿದಂತೆ ದಾದನಟ್ಟಿ ಗ್ರಾಮದ ಜಿ.ಆರ್.ಬಿ.ಸಿ. ಕೇನಾಲ ಹತ್ತಿರ ಬ್ಯಾನರ ಹರಿದ ವಿಚಾರವಾಗಿ ಪಂಚನಾಮೆ ಮಾಡಿ, ಈಗ ನೋಡುತ್ತಿರುವ ನಿಪಿ-**8** ರ ಮೇಲೆ ಸಹಿ ಮಾಡಿರುತ್ತಾರೆ ಎಂದರೆ ಸರಿ.

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 2**
**ಚಾ.ಸಾ.ಸಂಖ್ಯೆಃ 7**

**ಪಾಟಿಸವಾಲು: ಆರೋಪಿತತ ಪರ ಶ್ರೀ. ಆರ್.ಟಿ.ಹೆಚ್. ವಕೀಲರಿಂದ:**

**1.** ನಿಪಿ-**8** ರಲ್ಲಿ ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಪೋಟೊ ತೆಗೆಸುವಾಗ ಯಾವ ಕಾರಣಕ್ಕಾಗಿ ತೆಗೆಸಿರುತ್ತಾರೆ ಅಂತ ಹೇಳಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ಜಾಗೆಯಲ್ಲಿ ಯಾವುದೇ ಬ್ಯಾನರ ಇರಲಿಲ್ಲ. ಆ ಬ್ಯಾನರ ಬಗ್ಗೆ ನಮಗೆ ಯಾವುದೇ ವಿಷಯ ಹೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**